1	2	3	4
21.	24	ಶೇಷಾದ್ರಿಪುರ ಕಮರ್ಷಿಯಲ್ ಟ್ಯಾಕ್ಸ್ ಹತ್ತಿರ	ಸ್ಥಳೀಯ ಸಾರ್ವಜನಿಕರಿಂದ ಆಕ್ಷೇಪಣೆ ಇರುತ್ತದೆ
22.	31	ಟೋಲ್‌ಗೇಟ್ ಬಸ್ ನಿಲ್ದಾಣದ ಹತ್ತಿರ, ಮಾಗಡಿ ರೋಡ್.	ಸ್ಥಳೀಯ ನಾಯಕರಿಂದ ಆಕ್ಷೇಪಣೆ ಇರುತ್ತದೆ
23.	31	ಮಯೂರ ಹೋಟೇಲ್ ಹತ್ತಿರ, ರಾಜ್‌ಕುಮಾರ್ ರೋಡ್	ನಿವೇಶನ ವಿವಾದದಲ್ಲಿರುತ್ತದೆ
24.	3	ಟೆಂಪೋ ಸ್ಟಾಂಡ್ ಹತ್ತಿರ 60 ಅಡಿ ರಸ್ತೆ ಯಶವಂತಪುರ	ನಿವೇಶನ ವಿವಾದದಲ್ಲಿರುತ್ತದೆ
25.	48	ಕಾರ್ ಪಾರ್ಕಿಂಗ್ ಲಾಟ್ ಹತ್ತಿರ, ಜೆ.ಸಿ. ರೋಡ್.	ನಿವೇಶನ ವಿವಾದದಲ್ಲಿರುತ್ತದೆ

5347(5779) ಶ್ರೀ ಅಶೋಕ್ ಆರ್. (ಉತ್ತರಹಳ್ಳಿ) : ಮಾನ್ಯ ಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ಉತ್ತರಹಳ್ಳಿ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಗೆ ಬರುವ ಬೆಂಗಳೂರು ಉತ್ತರ ತಾಲ್ಲೂಕು ವ್ಯಾಪ್ತಿಗೆ ಒಳಪಟ್ಟಿರುವ ಅಂದ್ರಹಳ್ಳಿ, ಹೇರೋಹಳ್ಳಿ, ವಿದ್ಯಾಮಾನ್ಯನಗರ, ಸೌಮ್ಯಕಾಳಿ ನಗರ, ಅಂಜನಾನಗರ, ಭಾರತ್ ನಗರ ಇನ್ನೂ ಅನೇಕ ಗ್ರಾಮಗಳ ಜನರು ಹತ್ತಿರ ಪೋಲೀಸ್ ಠಾಣೆಗಳ ಸೌಲಭ್ಯದಿಂದ ವಂಚಿತರಾಗಿ ಭಯದ ವಾತಾವರಣದಲ್ಲಿ ಜೀವನ ಸಾಗಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಪೀಣ್ಯ ಪೊಲೀಸ್ ಠಾಣೆ, ರಾಜಗೋಪಾಲನಗರ ಪೊಲೀಸ್ ಠಾಣೆಯವರು ಈ ಮೇಲೆ ನಮೂದಿಸಿರುವ ಪ್ರದೇಶಗಳು ತಮ್ಮ ವ್ಯಾಪ್ತಿಗೆ ಬರುವುದಿಲ್ಲವಾದ್ದರಿಂದ ಕಳ್ಳತನ, ದರೋಡೆ ಪ್ರಕರಣಗಳಲ್ಲಿ ತಾವು ಕ್ರಮ ಜರುಗಿಸಲು ಬರುವುದಿಲ್ಲವೆಂದು ತಿಳಿಸುತ್ತಿರುವುದು ನಿಜವೇ?

ಇ) ಈ ಪೋಲೀಸ್ ಗ್ರಾಮಗಳು ತಾವರೆಕೆರೆ ಪೋಲೀಸ್ ಠಾಣೆಗೆ ಮತ್ತು ನೆಲಮಂಗಲ ಪೋಲೀಸ್ ಠಾಣೆಗೆ ಬರುವುದರಿಂದ ಈ ಠಾಣೆಗಳು ಸುಮಾರು 20 ಕಿ.ಮೀ. ದೂರವಿರುವುದರಿಂದ ಜನರಿಗೆ ಅನುಕೂಲವಾಗುವ ಹಾಗೂ ಕಳ್ಳತನ, ದರೋಡೆ, ಪ್ರಕರಣವನ್ನು ನಿಯಂತ್ರಿಸುವ ಸಲುವಾಗಿ ಹತ್ತಿರದಲ್ಲಿ ಒಂದು ಪೋಲೀಸ್ ಠಾಣೆಯನ್ನು ತೆರೆಯಲು ಸರ್ಕಾರ ಚಿಂತನೆ ನಡೆಸಿದೆಯೇ? (ಸ್ಪಷ್ಟ ವಿವರ ನೀಡುವುದು)

ಶ್ರೀ ಧರ್ಮಸಿಂಗ್ (ಮುಖ್ಯಮಂತ್ರಿಗಳು) :

ಅ) ಉತ್ತರಹಳ್ಳಿ ವಿಧಾನ ಸಭಾ ಕ್ಷೇತ್ರದ ವ್ಯಾಪ್ತಿಗೆ ಬರುವ ಬೆಂಗಳೂರು ಉತ್ತರ ತಾಲ್ಲೂಕಿನ ಅಂದ್ರಹಳ್ಳಿ, ಹೇರೋಹಳ್ಳಿ, ವಿದ್ಯಾಮಾನ್ಯನಗರ, ಸೌಮ್ಯಕಾಳಿನಗರ, ಅಂಜನಾನಗರ, ಭಾರತ್ ನಗರ ಇತ್ಯಾದಿ ಹಳ್ಳಿಗಳು (ಎಸ್.ಪಿ., ಬೆಂಗಳೂರು ಜಿಲ್ಲೆ ಅವರ ವ್ಯಾಪ್ತಿ) ಹಾಗೂ ಉತ್ತರಹಳ್ಳಿ ವಿಧಾನಸಭಾ ವ್ಯಾಪ್ತಿಯಲ್ಲಿ ಬರುವ ಇತರ ಪೋಲೀಸ್ ಠಾಣೆ ಸರಹದ್ದಿನ (ಬೆಂಗಳೂರು ನಗರ ಪೋಲೀಸ್) ಹಳ್ಳಿಗಳಿಂದ ಈ ರೀತಿಯ ಯಾವುದೇ ವ್ಯಾಪ್ತಿ ವರ್ತಮಾನ ಬಂದಿರುವುದಿಲ್ಲ.

ಈ ಭಾಗಗಳಲ್ಲಿ ಸೂಕ್ತ ಪೋಲೀಸ್ ವ್ಯವಸ್ಥೆ ಏರ್ಪಡಿಸಲಾಗಿದೆ.

ನೆಲಮಂಗಲ ಪೋಲೀಸ್ ಠಾಣೆ ಸರಹದ್ದಿನ ಹೇರೋಹಳ್ಳಿ, ಕೊಡಿಗೆಹಳ್ಳಿ, ದೊಡ್ಡಬಿದರಕಲ್ಲು ಗ್ರಾಮ ಪಂಚಾಯ್ತಿ ವ್ಯಾಪ್ತಿಯ ಸಾರ್ವಜನಿಕರಿಗೆ ರಕ್ಷಣೆ ಒದಗಿಸಲು ಈಗಾಗಲೇ ಬ್ಯಾಡರಹಳ್ಳಿ ಬಳಿ ಒಂದು ಪೋಲೀಸ್ ಹೊರ ಠಾಣೆಯನ್ನು ಪ್ರಾರಂಭಿಸಲಾಗಿದೆ ಮತ್ತು ಸೂಕ್ತ ಗಸ್ತು ವ್ಯವಸ್ಥೆಯನ್ನು ಏರ್ಪಡಿಸಲಾಗಿದೆ. ಈ ಪ್ರದೇಶವು ಸೂಕ್ಷ್ಮ ಪ್ರದೇಶವಾದುದ್ದರಿಂದ ಹಿರಿಯ ಅಧಿಕಾರಿಗಳು ಈ ಪ್ರದೇಶಗಳಿಗೆ ಆಗಾಗ್ಗೆ ಭೇಟಿ ನೀಡಿ ಜನರ ಸಮಸ್ಯೆಗಳಿಗೆ ಸ್ಪಂದಿಸುತ್ತಿರುತ್ತಾರೆ.

ಇಲ್ಲಿಯವರೆಗೂ ಯಾವುದೇ ಭಯದ ವಾತಾವರಣದ ದೂರುಗಳು ಬಂದಿರುವುದಿಲ್ಲ.

ಆ) ಇದು ಸತ್ಯಕ್ಕೆ ದೂರವಾಗಿದೆ.

ಪೀಣ್ಯ ಮತ್ತು ರಾಜಗೋಪಾಲ ನಗರ ಪೋಲೀಸ್ ಠಾಣೆಗಳ (ಬೆಂಗಳೂರು ನಗರ ಪೋಲೀಸ್) ವ್ಯಾಪ್ತಿಗೆ ಬರುವ ಗ್ರಾಮಗಳಿಂದ ಸ್ವೀಕರಿಸುವ ಫಿರ್ಯಾದು ದೂರುಗಳ ಬಗ್ಗೆ ತಕ್ಷಣ ಕಾನೂನು ರೀತ್ಯಾ ಕ್ರಮ ಕೈಗೊಂಡು ಕೃತ್ಯ ನಡೆದ ಸ್ಥಳಕ್ಕೆ ಭೇಟಿ ನೀಡಿ ತದನಂತರ ಸರಹದ್ದಿನ ಆಧಾರದ ಮೇರೆಗೆ ಮುಂದಿನ ತನಿಖೆ ಸಲುವಾಗಿ ಪ್ರಕರಣವನ್ನು ಬೆಂಗಳೂರು ಜಿಲ್ಲೆಗೆ ವರ್ಗಾಯಿಸಲಾಗುತ್ತಿದೆ.

ಕ್ರಮ ಜರುಗಿಸಲು ಬರುವುದಿರಲ್ಲವೆಮಧೂ ತಿಳಿಸಿರುವ ಬಗ್ಗೆ ಯಾವುದೇ ಪ್ರಕರಣಗಳು ವರದಿಯಾಗಿರುವುದಿಲ್ಲ.

ಇ) ಈ ಠಾಣೆಗಳಿಗೆ ದೂರದಲ್ಲಿರುವ ಗ್ರಾಮಗಳ ಸಾರ್ವಜನಿಕರಿಗೆ ರಕ್ಷಣೆ ಒದಗಿಸಲು ಹಾಲಿ ಬ್ಯಾಡರಹಳ್ಳಿಯಲ್ಲಿ ಈಗಾಗಲೇ ಹೊರಠಾಣೆಯನ್ನು ಪ್ರಾರಂಭಿಸಲಾಗಿದೆ.

ಈ ಪ್ರದೇಶಗಳಲ್ಲಿ ಸಾರ್ವಜನಿಕರ ರಕ್ಷಣೆ ಸಲುವಾಗಿ ಬೆಂಗಳೂರು ಉತ್ತರ ತಾಲ್ಲೂಕು ಯಶವಂತಪುರ ಹೋಬಳಿ, ತಾವರೆಕೆರೆ ಪೋಲೀಸ್ ಠಾಣಾ ವ್ಯಾಪ್ತಿಗೆ ಬರುವ ಅಂದ್ರಹಳ್ಳಿ ಬಳಿ ಹಾಗೂ ನೆಲಮಂಗಲ ಪೋಲೀಸ್ ಠಾಣೆ ಸರಹದ್ದಿನ ಮಾದನಾಯಕನಹಳ್ಳಿ ಗ್ರಾಮದಲ್ಲಿ ಹೊಸದಾಗಿ ಪೋಲೀಸ್ ಠಾಣೆ ತೆರೆಯುವ ಬಗ್ಗೆ ಇಲಾಖೆಯಲ್ಲಿ ಪ್ರಸ್ತಾವನೆ ಸ್ವೀಕರಿಸಲಾಗಿದ್ದು, ಈ ಬಗ್ಗೆ ಸೂಕ್ತ ಕ್ರಮ ತೆಗೆದುಕೊಳ್ಳಲಾಗುವುದು.

5348(5780) ಶ್ರೀ ಆರ್. ಅಶೋಕ್ (ಉತ್ತರಹಳ್ಳಿ) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) 2004–05ನೇ ಸಾಲಿನಲ್ಲಿ ಬೆಂಗಳೂರು ಮಹಾನಗರ ತೋಟಗಾರಿಕಾ ವಿಭಾಗದಲ್ಲಿ ನಗರದ 100 ವಾರ್ಡ್‌ಗಳಲ್ಲಿ ಕೈಗೊಂಡಿರುವ ಹಾಗೂ ಕೈಗೊಳ್ಳಲು ಅನುಮೋದಿಸಿರುವ ಕಾಮಗಾರಿಗಳು ಯಾವುವು; (ವಾರ್ಡ್‌ಗಳವಾರು ವಿವರ ನೀಡುವುದು);

ಆ) ಅದೇ ರೀತಿ ನಗರ ಪಾಲಿಕೆ ನಿರ್ವಹಣೆ ಮಾಡುವ ಉದ್ಯಾನವನಗಳ ಸಂಖ್ಯೆ ಎಷ್ಟು ಹಾಗೂ ಇದರ ನಿರ್ವಹಣೆಗಳಿಗಾಗಿ ಆಗುವ ಖರ್ಚು ಎಷ್ಟು;

ಇ) ಈ ಪೈಕಿ ಗುತ್ತಿಗೆದಾರರು ಉದ್ಯಾನವನಗಳ ನಿರ್ವಹಣೆ ಮಾಡಬೇಕಾದ ಕಾಮಗಾರಿ ಗಳ್ಯಾವುವು ಹಾಗೂ ಇವುಗಳ ಉಸ್ತುವಾರಿ ಯಾರಿಗೆ ವಹಿಸಲಾಗಿದೆ;

ಈ) ನಿಬಂಧನೆಗಳನ್ನು ಉಲ್ಲಂಘಿಸಿದ ಗುತ್ತಿಗೆದಾರರ ಮೇಲೆ ಯಾವ ಕ್ರಮ ಜರುಗಿಸಲಾಗಿದೆ ಮತ್ತು ಒಟ್ಟು ಎಷ್ಟು ಜನ ಗುತ್ತಿಗೆದಾರರಿಗೆ ಉದ್ಯಾನವನಗಳ ನಿರ್ವಹಣೆ ಗುತ್ತಿಗೆ ನಿಡಿದೆ;

ಉ) ಒಬ್ಬರೇ ಗುತ್ತಿಗೆದಾರರಿಗೆ ಒಂದಕ್ಕಿಂತ ಹೆಚ್ಚು ಉದ್ಯಾನಗಳ ಗುತ್ತಿಗೆ ನೀಡಿರುವ ವಿವರಗಳನ್ನು ನೀಡುವುದು;